ಇ) ಎರಡನೇ ಹಂತದ ಕಾಮಗಾರಿ ಪ್ರಾರಂಭಿಸುವ ಕುರಿತು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಡಿ. ಮಂಜುನಾಥ್ ಉನ್ನತ ಶಿಕ್ಷಣ ಸಚಿವರು. :

ಅ) ಬಂದಿದೆ.

ಆ) ಅನುದಾನದಕೊರತೆಯಿಂದಾಗಿ ಕೊಠಡಿಗಳ ನಿರ್ಮಾಣ ಕಾರ್ಯವನ್ನು ಕೈಗೊಂಸಿರುವುದಿಲ್ಲ.

ಇ) ಸದರಿ ಕಾಲೇಜಿಗೆ ಕಟ್ಟಡದ ಅಗತ್ಯತೆಯನ್ನುಮನಗಂಡು ಎರಡನೇ ಹಂತದ ಹುಡ್ಕೋ ಯೋಜನೆಯಡಿ ಪ್ರಸ್ತಾಪಿಸಿದ್ದು, ಆರ್ಥಿಕ ಇಲಾಖೆಯ ಅನುಮೋದನೆ ದೊರೆತ ಕೂಡಲೇ ಅಗತ್ಯ ಅನುದಾನ ಬಿಡುಗಡೆಗಾಗಿ ಕ್ರಮ ಕೈಗೊಳ್ಳಲಾಗುವುದು.

5022 (5313) ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) :– ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದ ಬೋಧಕ ಹಾಗೂ ಇತರ ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳಿಂದ ವಸೂಲು ಮಾಡುತ್ತಿರುವ ಯೂಸರ್ಸ್ ಚಾರ್ಜಸ್ ಅನ್ನು ಸರ್ಕಾರ ರದ್ದುಗೊಳಿಸಿದೆಯೇ :

ಆ) ಹಾಗಿದ್ದಲ್ಲಿ, ಯಾವಾಗ ರದ್ದುಗೊಳಿಸಲಾಗಯಿತು;

ಇ) ಇದರಿಂದ ಯಾವ ಯಾವ ಗುಂಪಿನ ರೋಗಿಗಳಿಗೆ ಅನುಕೂಲವಾಗುವುದು;

ಈ) ಇದರಿಂದ ಆಸ್ಪತ್ರೆಗಳಲ್ಲಿ ವಸೂಲಾಗುತ್ತಿದ್ದ ವಾರ್ಷಿಕ ಯೂಸರ್ಸ್ ಚಾರ್ಜಸ್ ಹಣವನ್ನು ಭರ್ತಿ ಮಾಡಿಕೊಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಇಕ್ಬಾಲ್ ಆನ್ಸಾರಿ ವೈದ್ಯಕೀಯ ಶಿಕ್ಷಣ ಸಚಿವರು. :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ

ಈ) ಸರ್ಕಾರಿ ಆಸ್ಪತ್ರೆಗಳಲ್ಲಿ ಯೂಸರ್ಸ್ ಚಾರ್ಜಸ್ ಅನ್ನು ರದ್ದುಗೊಳಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ. ಆಗ ಯೂಸರ್ಸ್ ಚಾರ್ಜಸ್ ಭರ್ತಿ ಮಾಡಿಕೊಡುವುದನ್ನು ಪರಿಶೀಲಿಸಲಾಗುವುದು

5023 (5314) ಶ್ರೀ . ಕಟ್ಟಾಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ಹೊರರಾಜ್ಯಗಳಿಂದ ನಕಲಿ ಔಷಧ ಸರಬರಾಜಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಎಷ್ಟು ಮೌಲ್ಯದ ನಕಲಿ ಔಷಧಗಳು ರಾಜ್ಯದಲ್ಲಿ ಮಾರಾಟವಾಗುತ್ತಿರುವುದನ್ನು ಪತ್ತೆ ಹಚ್ಚಲಾಗಿದೆ;

ಇ) ಈ ನಕಲಿ ಔಷಧ ಮಾರಾಟವಾಗುವುದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎನ್. ಚಲುವರಾಯಸ್ವಾಮಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.:

ಅ) ಹೌದು.

ಆ) ಸುಮಾರು ಎಳೂವರೆ ಲಕ್ಷ ರೂ.ಗಳ ಮೌಲ್ಯದ ಔಷಧಗಳನ್ನು ವಶಪಡಿಸಿಕೊಳ್ಳಲಾಗಿದೆ.

ಇ) ನಕಲಿ ಔಷಧ ಮಾರಾಟ ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ :

1. ಔಷಧ ನಿಯಂತ್ರಣ ಇಲಾಖೆಯಲ್ಲಿ ನಾಲ್ಕು ಗುಪ್ತವಾರ್ತಾ ವಿಭಾಗಗಳು ಬೆಂಗಳೂರು, ಮೈಸೂರು, ಹುಬ್ಬಳ್ಳಿ ಮತ್ತು ಗುಲ್ಬರ್ಗಾಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ.

2. ನಕಲಿ ಔಷಧ ಮಾರಾಟ ತಡೆ ಗಟ್ಟಲು ಕಟ್ಟೆಚ್ಚರ ವಹಿಸಲಾಗುತ್ತಿದೆ.

3. ಔಷಧ ಉದ್ಯಮಿಗಳು ಮತ್ತು ಔಷಧ ವ್ಯಾಪಾರಿಗಳ ಸಂಘಟನೆಗಳೊಡನೆ ಪರಸ್ಪರ ವಿಚಾರ ವಿನಿಮಯ ಮತ್ತು ಮಾಹಿತಿ ಸಂಗ್ರಹಣೆಗೆ ಕ್ರಮ ಕೈಗೊಳ್ಳಲಾಗಿದೆ.

4. ಗ್ರಾಹಕರಲ್ಲಿ ಜಾಗೃತಿ ಮೂಡಿಸಲು ಈ ವರ್ಷ ರೂ.26 ಲಕ್ಷಗಳನ್ನು ಆಯವ್ಯಯದಲ್ಲಿ ಕಾಯ್ದಿರಿಸಲಾಗಿದೆ.

5. ಪತ್ತೆ ಹಚ್ಚಿದ ನಕಲಿ ಔಷಧಗಳ ಬಗ್ಗೆ ಮಾಧ್ಯಮದಲ್ಲಿ ಪ್ರಚಾರ ನೀಡಲಾಗುತ್ತಿದೆ.

5024 (5315) ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) :– ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರ ಸಂಖ್ಯೆ ಎಷ್ಟು;

ಆ) 2005ರಲ್ಲಿ ವರ್ಗಾವಣೆ ಕೋರಿ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರಿಂದ ಬಂದ ಮನವಿಗಳ ಸಂಖ್ಯೆ ಎಷ್ಟು;

ಇ) ಇಲ್ಲಿಯವರಿಗೆ ಎಷ್ಟು ಶಿಕ್ಷಕರ ವರ್ಗಾವಣೆ ಮಾಡಲಾಗಿದೆ;

ಈ) ಶಿಕ್ಷಕರ ವರ್ಗಾವಣೆಯಲ್ಲಿ ಸರ್ಕಾರ ಅನುಸರಿಸಿದ ಮಾನದಂಡವೇನು?

ಶ್ರೀ ಆರ್. ರಾಮಲಿಂಗರೆಡ್ಡಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು. :

ಅ) ರಾಜ್ಯದಲ್ಲಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಶಿಕ್ಷಕರ ಸಂಖ್ಯೆ ಈ ಕೆಳಗಿನಂತಿದೆ:

ಪ್ರಾಥಮಿಕ –1,85,800

ಪ್ರೌಢ – 38,128

ಆ) 2005ರಲ್ಲಿ ವರ್ಗಾವಣೆ ಕೋರಿ ಬಂದ ಶಿಕ್ಷಕರ ಮನವಿಗಳ ಸಂಖ್ಯೆ ಈ ಕೆಳಕಂಡಂತಿದೆ:

ಪ್ರಾಥಮಿಕ – 20484

ಪ್ರೌಢ – 4150

ಇ) ಪ್ರಾಥಮಿಕ – 6479 ಶಿಕ್ಷಕರು

ಪ್ರೌಢ – 975 ಶಿಕ್ಷಕರು

ಈ) ಸರ್ಕಾರದ ಆದೇಶ ಸಂಖ್ಯೆ ಇಡಿ 298 ಡಿಪಿಐ 2005 ದಿನಾಂಕ 4.5.2005 ಹಾಗೂ ದಿನಾಂಕ 21.6.2005ರಲ್ಲಿ ತಿಳಿಸಿರುವ ವರ್ಗಾವಣೆ ಮಾರ್ಗಸೂಚಿಗಳನ್ನು ಶಿಕ್ಷಕರ ವರ್ಗಾವಣೆಗೆ ಮಾನದಂಡವಾಗಿ ಪರಿಗಣಿಸಲಾಗಿದೆ.